1	2	3	4
2.	ಎಸ್.ಎಸ್.ಎಲ್.ಸಿ. ಅನುತ್ತೀರ್ಣರಾಗಿ 5 ವರ್ಷ ಸೇವೆ	969	250
3.	ಎಸ್.ಎಸ್.ಎಲ್.ಸಿ. ಅನುತ್ತೀರ್ಣರಾಗಿ 10 ವರ್ಷ ಸೇವೆ	1000	250
4.	ಎಸ್.ಎಸ್.ಎಲ್.ಸಿ. ಉತ್ತೀರ್ಣ	1000	250
5.	ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿ 5 ವರ್ಷ ಸೇವೆ	1031	250
	ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿ 10 ವರ್ಷ ಸೇವೆ	1063	250
6.	ಅಂಗನವಾಡಿ ಸಹಾಯಕಿಯರು	500	125

ಅನುಬಂಧ–2

ಅಂಗನವಾಡಿ ಕಾರ್ಯಕರ್ತೆಯರ ಕೆಲವು ಬೇಡಿಕೆಗಳನ್ನು ಈಡೇರಿಸಿ ಕಾರ್ಯಗತಗೊಳಿಸಿದ ವಿವರ:

1) ಬೇಸಿಗೆ ರಜೆ:

ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ವರ್ಷಕ್ಕೊಮ್ಮೆ 7 ದಿವಸಗಳ ಕಾಲ ಬೇಸಿಗೆ ರಜೆಯನ್ನು ಮಂಜೂರು ಮಾಡಲಾಗಿದೆ.

2) ಉರುವಲು ಹಣ ನೀಡುವ ಬಗ್ಗೆ:

ಪ್ರತಿ ಅಂಗನವಾಡಿ ಕೇಂದ್ರಕ್ಕೆ ಮಾಹೆಯಾನ ರೂ. 100/–ಗಳನ್ನು ಉರುವಲಿಗಾಗಿ ಇಲಾಖೆಯಿಂದಲೇ ನೀಡಲು ಆದೇಶ ನೀಡಲಾಗಿದೆ.

3) ಗೌರವಧನ:

ದಿನಾಂಕ 01–04–02 ರಿಂದ ಅನ್ವಯವಾಗುವಂತೆ ಕೇಂದ್ರ ಸರ್ಕಾರದಿಂದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ನೀಡುತ್ತಿರುವ ಗೌರವಧನ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ ರೂ. 500/– ಹಾಗೂ ಸಹಾಯಕಿಯರಿಗೆ ರೂ. 240/– ಹೆಚ್ಚಿಸಲಾಗಿದೆ.

4) ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಮರಣ ಪರಿಹಾರ ನಿಧಿ :

ದಿನಾಂಕ : 10–9–01 ರಿಂದ "ಮರಣ ಪರಿಹಾರ ನಿಧಿ" ಮಂಜೂರಾಗಿದ್ದು ಸೇವೆಯಲ್ಲಿ ಇರುವಾಗ ಮರಣ ಹೊಂದಿದ್ದ ಅಂಗನವಾಡಿ ಕಾರ್ಯಕರ್ತೆಯರ ವಾರಸ್ಸುದಾರರಿಗೆ (ಅಥವಾ ನಾಮ ನಿರ್ದೇಶನದಂತೆ) ರೂ. 20,000/– ಗಳನ್ನು ಹಾಗೂ ಸಹಾಯಕಿಯರ ವಾರಸ್ಸುದಾರರಿಗೆ ರೂ. 10,000/– ಗಳನ್ನು ನೀಡಲಾಗುತ್ತಿದೆ.

ರಾಜ್ಯದಲ್ಲಿ ಬಾಳೆ ಗಿಡಗಳಿಗೆ ವಿಮೆ

3252(3647) ಶ್ರೀ ಎನ್.ಎಚ್.ಶಿವಶಂಕರ ರೆಡ್ಡಿ (ಗೌರಿ ಬಿದನೂರು) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಬಾಳೇಗಿಡ ಬೆಳೆದ ರೈತಾಪಿ ವರ್ಗದವರ ಬಾಳೇಗಿಡ ಬೆಳೆಗೆ ವಿಮಾ ಯೋಜನೆಯನ್ನು ಜಾರಿಗೆ ತರದೇ ಇರುವುದು ಕಾರಣವೇನು;

ಆ) ಈ ಬೆಳೆಗೆ ಕೃಷಿ ವಿಮಾ ಯೋಜನೆಯು ಜಾರಿ ಇಲ್ಲದೇ ಪ್ರತಿ ವರ್ಷ ರೈತ ಲಕ್ಷಾನುಗಟ್ಟಲೆ ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದರೆ, ಸರ್ಕಾರವು ಬಾಳೆ ಗಿಡ ಬೆಳೆಯುವ ರೈತರಿಗೂ ಕೃಷಿ ವಿಮಾ ಯೋಜನೆಯನ್ನು ವ್ಯವಸ್ಥೆ ಮಾಡಬಹುದೆ?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) :

ಅ) ಬೆಳೆ ವಿಮೆ ವ್ಯಾಪ್ತಿಗೆ ಬಾಳೆ ಬೆಳೆಯನ್ನು ಒಳಪಡಿಸಲು ಕೇಂದ್ರ ಸರ್ಕಾರದ ಅನುಮೋದನೆ ಅಗತ್ಯವಾಗಿರುತ್ತದೆ. ಈ ಸಂಬಂಧ ಬೆಳೆ ಕಟಾವು ಪ್ರಯೋಗ ಆಧಾರಿತ ಕನಿಷ್ಟ ವಿಸ್ತೀರ್ಣ ಮತ್ತು ಇಳುವರಿ ಮಾಹಿತಿಯು ಲಭ್ಯವಿಲ್ಲವೆಂದು ಭಾರತೀಯ ಸಾಮಾನ್ಯ ವಿಮಾ ನಿಗಮವು ತಿಳಿಸಿದೆ. ಬಾಳೆ ಬೆಳೆಯನ್ನು ರಾಷ್ಟ್ರೀಯ ಕೃಷಿ ವಿಮಾ ಯೋಜನೆ ವ್ಯಾಪ್ತಿಗೆ ಒಳಪಡಿಸುವ ಸಾಧ್ಯತೆಗಳನ್ನು ಅಭ್ಯಸಿಸಲು ತಮಿಳುನಾಡಿನಲ್ಲಿ ಪೈಲಟ್ ಯೋಜನೆಯಡಿಯಲ್ಲಿ ಮಾದರಿ ಸಮೀಕ್ಷೆ ಕೈಗೊಂಡಿದ್ದು ನಿರ್ಧಾರ ಇನ್ನೂ ತೆಗೆದುಕೊಳ್ಳಬೇಕಾಗಿದೆಯೆಂದು ಭಾರತೀಯ ಸಾಮಾನ್ಯ ವಿಮಾ ನಿಗಮವು ತಿಳಿಸಿರುತ್ತದೆ.

ಆ) ಬಂದಿದೆ.

ಇ) ಬಾಳೆ ಬೆಳೆಯನ್ನು ರಾಷ್ಟ್ರೀಯ ಕೃಷಿ ವಿಮಾ ಯೋಜನೆ ವ್ಯಾಪ್ತಿಗೆ ಒಳಪಡಿಸಲು ಪೈಲಟ್ ಯೋಜನೆಯ ಫಲಿತಾಂಶವನ್ನು ಆಧರಿಸಿ ಕೇಂದ್ರ ಸರ್ಕಾರವು ಅಗತ್ಯ ರೂಪುರೇಷೆಗಳನ್ನು ನಿಗದಿಪಡಿಸುವುದೆಂದು ನಿರೀಕ್ಷಿಸಲಾಗಿದೆ.

ಬೆಂಗಳೂರಿನ ಲಾಲ್‌ಬಾಗ್‌ಗೆ ಪ್ರವೇಶ ಶುಲ್ಕವನ್ನು ಏರಿಸಿರುವುದು

3253(3707) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಲಾಲ್‌ಬಾಗ್‌ಗೆ ಪ್ರವೇಶ ಶುಲ್ಕವನ್ನು ಇತ್ತೀಚೆಗೆ ಏರಿಸಲಾಗಿದೆ; ಹಾಗಿದ್ದಲ್ಲಿ, ಈಗಿನ ಪ್ರವೇಶ ಶುಲ್ಕ ಎಷ್ಟು ಹಾಗೂ 2002–03ನೇ ಸಾಲಿನಲ್ಲಿ ಪ್ರವೇಶ ಶುಲ್ಕದಿಂದ ಹಗೂ ಖರ್ಚು ಮಾಡಿದ ಹಣ ಎಷ್ಟು;

ಆ) ಪ್ರವೇಶ ಶುಲ್ಕದಿಂದ ಸಾರ್ವಜನಿಕರಿಗೆ ಮತ್ತು ಪ್ರವಾಸಿಗರಿಗೆ ಅಧಿಕ ಹೊರೆ ಬೀಳುವುದಲ್ಲವೆ; ಹಾಗಿದ್ದಲ್ಲಿ, ಶುಲ್ಕವನ್ನು ಕಡಿಮೆ ಮಾಡಲು ತೆಗೆದುಕೊಂಡ ಕ್ರಮಗಳಾವುವು;

ಇ) ಲಾಲ್‌ಬಾಗಿನ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ತೋಟಗಾರಿಕೆ ಇಲಾಖೆಯಿಂದ ಖಾಸಗಿಯವರಿಗೆ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿಕೊಡಲಾಗುತ್ತದೆಯೆ;

ಈ) ಇದನ್ನು ಅಭಿವೃದ್ಧಿ ಪಡಿಸಲು ಸರ್ಕಾರದ ಯೋಜನೆಗಳೇನು; ಇದರ ಅಂದಾಜು ವೆಚ್ಚ ಎಷ್ಟು;

ಉ) ಗಾಜಿನ ಮನೆ ನವೀಕರಣ ಹಾಗೂ ಕೊಳದ ದುರಸ್ತಿಗಾಗಿ ಕೇಂದ್ರ ಸರ್ಕಾರದ ನೆರವನ್ನು ಕೋರಲಾಗಿದೆಯೆ?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) :

ಅ) ಈಗಿನ ಪ್ರವೇಶ ಶುಲ್ಕ ರೂ. 5–00. 2002–03ನೇ ಸಾಲಿನಲ್ಲಿ ಒಟ್ಟಾರೆ 90.76 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. (ಯೋಜನಾ ಅನುದಾನದಿಂದ 55.71 ಲಕ್ಷ ರೂ. ಹಾಗೂ ಗಾರ್ಡನ್ ಟ್ರಸ್ಟ್‌ನಿಂದ 33.05 ಲಕ್ಷ ರೂ.ಗಳು)